# ಅಂಶ - 16 ಆತ್ಮ ಕಥೆ

ವಿಷಯಕ್ರಮ

16.0 ಉದ್ದೇಶ
16.1 ಪೀಠಿಕೆ
16.2 ಪಠ್ಯ
ಅಭ್ಯಾಸ
16.3 ಸಾರಾಂಶ
ಅಭ್ಯಾಸಗಳಿಗೆ ಉತ್ತರಗಳು

## 16.0 ಉದ್ದೇಶ

- ಈ ಅಂಶವನ್ನು ಓದಿದ ನಂತರ ಆತ್ಮಕಥೆಯ ಸ್ವರೂಪವನ್ನು ಅರಿಯುವಿರಿ.
- ಆತ್ಮಕಥೆಯನ್ನು ಬರೆಯಲು ಪ್ರೇರಣೆಯಾಗುವ ಅಂಶಗಳನ್ನು ಮನಗಾಣುವಿರಿ.
- ಆತ್ಮಕಥೆಯನ್ನು ಬರೆಯುವ ಕ್ರಮವನ್ನು ಗಮನಿಸುವಿರಿ.
- ಪ್ರತಿಯೊಬ್ಬನ ಆತ್ಮಕಥೆಯೂ ರೋಚಕವಾಗಬಲ್ಲುದು ಎಂಬುದನ್ನು ಮನಗಾಣುವಿರಿ.

## 16.1 ಪೀಠಿಕೆ

ವ್ಯಕ್ತಿ ತನ್ನ ಜೀವನ ಚರಿತ್ರೆಯನ್ನು ಬರೆದರೆ ಅದು ಆತ್ಮಕಥೆಯಾಗುತ್ತದೆ. ಇದನ್ನು 'ಆತ್ಮವೃತ್ತ' ಎಂದೂ ಕರೆಯುತ್ತಾರೆ. ಪತ್ರಗಳು (ದಿನಚರಿ, ಜರ್ನಲ್‌ಗಳು, ಬಖೈರುಗಳು), ವೈಯಕ್ತಿಕ ಪ್ರಬಂಧಗಳು ಮುಂತಾದುವು ಈ ವರ್ಗಕ್ಕೆ ಸೇರುತ್ತವೆ. ಮಾನವನ ವ್ಯಕ್ತಿತ್ವ ತನ್ನನ್ನು ತಾನು ಅರಿತುಕೊಂಡು ನಡೆದು ಬಂದ ದಾರಿಯನ್ನು ಸಿಂಹಾವಲೋಕನ ಮಾಡಿಕೊಳ್ಳುವ ಒಂದು ಘಟ್ಟದಲ್ಲಿ ಆತ್ಮಕಥೆ ಅಥವಾ ಆತ್ಮಚರಿತ್ರೆ ಬರೆಯಲ್ಪಡುತ್ತದೆ.

ಭಾರತೀಯ ಸಾಹಿತ್ಯದಲ್ಲಿ ಆತ್ಮಕಥೆಯ ಪ್ರಕಾರ 20ನೇ ಶತಮಾನದ್ದು. ಈ ನೆಲದಲ್ಲಿ ಆತ್ಮಕಥೆ ಬೆಳೆಯದುದಕ್ಕೆ ನಮ್ಮ ಜನರ ಅಲೌಕಿಕ ಜೀವನೋದ್ದೇಶವೇ ಕಾರಣವಿರಬಹುದು. ಆದರೆ ಪಂಪನಂತಹ ಲೇಖಕರು ತಮ್ಮ ಕಾವ್ಯದೊಳಗೇ ತಮ್ಮ ಬಗ್ಗೆ, ತಮ್ಮ ರಾಜರ ಬಗ್ಗೆ ಬರೆದುಕೊಳ್ಳುವುದನ್ನು ಕಾಣಬಹುದು.

ಪಾಶ್ಚಿಮಾತ್ಯರಲ್ಲೂ 'ಆತ್ಮಕಥೆ' ಎಂಬುದು 19ನೇ ಶತಮಾನದಲ್ಲಿ ಪ್ರತ್ಯೇಕವಾದ ಸಾಹಿತ್ಯ ಪ್ರಕಾರ ಎಂದು ಗುರಿತಿಸಲ್ಪಟ್ಟಿತು.

ಆತ್ಮಕಥೆಯನ್ನು ಬರೆಯಲು ಅನೇಕ ಉದ್ದೇಶಗಳಿರುತ್ತವೆ ಇಲ್ಲಿ ಜೀವನದ ಸ್ವಾರಸ್ಯ ಕೆಲಸಕಾರ್ಯಗಳು, ತಾಳಿದ ನಿಲುವುಗಳು, ಮಾಡಿದ ತಪ್ಪುಗಳು, ತಮ್ಮದೇ ಆದ ಜೀವನ ದೃಷ್ಟಿ ಹೇಗೆ ಬೆಳೆದು ಬಂದಿತು ಎಂಬುದನ್ನು ಗುರುತಿಸಿಕೊಳ್ಳುವುದು. ಅದಕ್ಕೆ ಒಂದು ಕ್ರಮವನ್ನು ಕಂಡುಕೊಳ್ಳುವುದಕ್ಕೆ ಆಸ್ಪದವಿರುತ್ತದೆ. ವ್ಯಕ್ತಿಯ ಜೀವನದ ವಿವರಗಳೇ ಅಲ್ಲದೆ ಕಲಾತ್ಮಕವಾಗಿ ಮತ್ತು ನೈಜವಾಗಿ ರಚಿಸಿದ ಒಬ್ಬ ವ್ಯಕ್ತಿಯ ಜೀವನ ಚರಿತ್ರೆಯನ್ನು 'ಆತ್ಮಕಥೆ' ಎಂದು ಕರೆಯಬಹುದು.

ಆತ್ಮಕಥೆ ಬರೆಯುವ ವ್ಯಕ್ತಿ ಸಾಹಿತಿಯಾಗೇ ಇರಬೇಕೆಂದಿಲ್ಲ. ರಾಜಕಾರಣಿ, ವಿಜ್ಞಾನಿ, ಸಂಗೀತಗಾರ, ಯಾರಾದರೂ ಆಗಿರಬಹುದು. ಈ ಪ್ರಕಾರದಲ್ಲಿ ಬರೆಯುವವರು ಸಾಮಾನ್ಯವಾಗಿ 'ತಾನೇಕೆ ಇದನ್ನು ಬರೆಯುತ್ತಿದ್ದೇನೆ' ಎಂದು ಸೂಚಿಸುತ್ತಾರೆ. ಉದಾಹರಣೆಗೆ: ಡಾ.ಶಿವರಾಮ ಕಾರಂತರು ಹೀಗೆ ಹೇಳಿಕೊಂಡಿದ್ದಾರೆ. ''ಇದೊಂದು ಪರಿ ಪೂರ್ಣವಾದ ಆತ್ಮವೃತ್ತವಲ್ಲ. ನಾನು ಪರಿಪೂರ್ಣನೂ ಆಗಿಲ್ಲ. ಈ ವಿಶ್ವವೇ ಪರಿಪೂರ್ಣತೆಗಾಗಿ ಹೆಣಗುತ್ತಿದೆಯೆಂದು ತಿಳಿದ ನಾನು, ಸರ್ವಜ್ಞಪಟ್ಟವನ್ನು ವಹಿಸಿಕೊಳ್ಳಲಾರೆ''. ''ನಾನು ಈಗ ಇಳಿವಯಸ್ಸಿಗೆ ಕಾಲಿರಿಸಿದ್ದೇನೆ. ಆದುದರಿಂದ ಈ ಬರವಣಿಗೆಯ ದಿನದತನಕ ಸಾಗಿದ ಚಿತ್ರವನ್ನು ಅದು ಕೊಡಬಲ್ಲುದೇ ಹೊರತು, ಪೂರ್ಣ ಜೀವನದ ಚಿತ್ರವನ್ನು ಕೊಡಲಾರದು''1

''ಸಾಮಾನ್ಯಬುದ್ಧಿಯ ಸಾಮಾನ್ಯ ಜೀವನದ ಪಾಮರನು ನಾನು. ಅಲ್ಲದೆ ಜೀವನ ಚರಿತ್ರೆಯನ್ನು ತಾನು ಬರೆಯುವುದು ಸನಾತನ ಸಂಪ್ರದಾಯವೂ ಅಲ್ಲ. ತಮ್ಮ ಸ್ತುತಿಯನ್ನು ಅನ್ಯರು ಮಾಡುವುದನ್ನು ಕೇಳುವುದನ್ನು ಕೂಡ ಯಾರು ಶೂಲದಂತೆ ತಿಳಿಯುತ್ತಿದ್ದರೋ ಅವರು ತಮ್ಮ ಸ್ತುತಿಯನ್ನು ತಾವೇ ಮಾಡಿಕೊಳ್ಳುವದೇ?'' ಎಂದು ''ಕನ್ನಡದ ಕುಲಪುರೋಹಿತ'' ಆಲೂರ ವೆಂಕಟರಾಯರು ಕುತೂಹಲಿಗಳಾಗಿರುತ್ತಾರೆ.2

ನಾವು ಆತ್ಮಕಥೆಯನ್ನು ಓದುವುದು, ಬರೆದವರ ದೃಷ್ಟಿಕೋನವನ್ನು, ಅವರ ಜೀವಿತದ ಕಾಲದಲ್ಲಿ ಅವರು ಪರಿಪಕ್ವತೆಯನ್ನು ಹೇಗೆ ಹೊಂದಿದರು, ಅವರ ಗೆಳೆಯರು ಯಾರು, ಅವರ ಒಳಮನಸ್ಸು ಎಂಥದು, ಖಾಸಗಿ ಬದುಕಿನ ದೃಷ್ಟಿ ಇವುಗಳನ್ನು ಅರಿಯಲು.

## 16.2 ಪಠ್ಯ

### ಅನಿಶ್ಚಿತ ಗುರಿ

1920ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ವಿದ್ಯಾಭ್ಯಾಸದ ಒಂದು ಹಂತ ಮುಗಿದ ಕಾಲಕ್ಕೆ ಮುಂದೇನು ಮಾಡಬೇಕು — ಎಂಬ ಸಮಸ್ಯೆ ವಿದ್ಯಾರ್ಥಿಗಳನ್ನು ಕಾಡಬೇಕಾದದ್ದು ಸಹಜ. ಅವರ ಪಾಲಿಗೆ ಓದಿದ್ದು ಸಾಕು, ಇಲ್ಲವೆ ಸಾಲದು — ಎಂಬೆರಡು ಮಾರ್ಗಗಳು ಕಾಣಿಸುತ್ತವೆಯಾದರೂ, ನಾಳಿನ ಜೀವನಕ್ಕಾಗಿ ಏನಾದರೊಂದು ವೃತ್ತಿ ಬೇಕಾಗುತ್ತದೆಂಬ ಪ್ರಶ್ನೆ ಅವರ ಎಳೆತನದಲ್ಲಿ ಪ್ರಾಮುಖ್ಯವೆನಿಸಿ ಕಾಣಬೇಕಾದರೆ, ಆ ಹೊರೆ ಏನೆಂಬ ತಿಳಿವು ಒಂದಿಷ್ಟಾದರೂ ಮೊದಲು ಉಂಟಾಗಿರಬೇಕು. ಆ ಚಿಂತೆ ನನಗೆ ಬಾರದ ರೀತಿಯಲ್ಲಿ ನನ್ನನ್ನು ಹೆತ್ತವರು ಅದನ್ನು ನಿರ್ವಹಿಸಿದ್ದರು. ಅವರು ಬೇಕಷ್ಟು ಕಷ್ಟಕಾರ್ಪಣ್ಯಗಳನ್ನು ತಮ್ಮ ಜೀವನದಲ್ಲಿ ಕಂಡವರಾದರೂ, ಮುಂದೆ ಕಷ್ಟಪಟ್ಟು ತಮ್ಮ ಆರ್ಥಿಕ ಸ್ಥಿತಿಯನ್ನು ಭದ್ರಪಡಿಸಿಕೊಂಡುದರಿಂದ, ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆತುರವನ್ನು ತಾಳಿದ್ದರು.

ಆ ಹೊತ್ತಿಗೆ ನನ್ನ ಅಣ್ಣಂದಿರೂ ಕಾಲೇಜಿನಲ್ಲಿ ಓದುತ್ತಿದ್ದರು; ತಮ್ಮಂದಿರು ಹಾಯ್‌ಸ್ಕೂಲಿಗೆ ಬಂದಿದ್ದರು. ಅವರಲ್ಲಿ ಯಾರೊಬ್ಬನೂ ನಮ್ಮ ತಂದೆಯಂತೆ — ತಂದೆಯ ಉದ್ಯೋಗವಾಗಿದ್ದ ಜವಳಿ ವ್ಯಾಪಾರವನ್ನು ನಡೆಸಿಕೊಂಡು ಹೋಗಬಹುದು, ಅಥವಾ ಬೇಕು — ಎಂಬ ಆಸೆಯನ್ನು ಸಹ ನಮ್ಮ ತಂದೆ ತಾಳಿದವರಲ್ಲ. ತಮ್ಮ ಮಕ್ಕಳು ಈಗಿನ ವಿದ್ಯಾಭ್ಯಾಸ ಪಡೆದು, ಹೊಸ ವೃತ್ತಿಗಳನ್ನು ಅವಲಂಬಿಸಬೇಕೆಂಬುದು ಅವರ ಅಪೇಕ್ಷೆಯಾಗಿತ್ತು. ನನ್ನ ದೊಡ್ಡ ಅಣ್ಣ ಆವಾಗಲೇ ವಕೀಲಿ ವೃತ್ತಿಗೆ ತರಬೇತಿಗೊಂಡು ಮಂಗಳೂರಿಗೆ ಬಂದು ನೆಲೆಸಿದ್ದ. ಇಂಥ ಆವರಣದಲ್ಲಿ ಯಾತಕ್ಕೆಂದು ಗೊತ್ತಿಲ್ಲದಿದ್ದರೂ ಅಣ್ಣಂದಿರಂತೆ ನನ್ನಲ್ಲೂ ಕಾಲೇಜಿಗೆ ಹೋಗಬೇಕು ಎಂಬ ಬಯಕೆ ಮೂಡಿತ್ತು. ಹಾಗೆಂದು ನಾನು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾದದ್ದು ಕೇವಲ ಒಬ್ಬ ಸಾಮಾನ್ಯ ವಿದ್ಯಾರ್ಥಿಯಂತೆಯೇ ಹೊರತು, ಕಲಿತ ವಿಷಯಗಳಲ್ಲಿ ವಿಶೇಷ ಆಸಕ್ತಿಯನ್ನಾಗಲೀ ಹೆಚ್ಚಿನ ತಿಳಿವನ್ನಾಗಲೀ ಪಡೆದಿರಲಿಲ್ಲ. ಅಂತೂ 1920ರ ಜೂನ್ ಕೊನೆಗೆ, ಮಂಗಳೂರಿನ ಗವರ್ನಮೆಂಟ್ ಕಾಲೇಜನ್ನು ಸೇರಿ, ವಿಜ್ಞಾನ ಮತ್ತು ಗಣಿತಗಳನ್ನು ಐಚ್ಛಿಕ ವಿಷಯಗಳನ್ನಾಗಿ ಆರಿಸಿ, ಪ್ರವೇಶ ಪಡೆದೆ. ವಾಸಕ್ಕೆ ಅಣ್ಣನ ಮನೆಯೇ ಇತ್ತು. ನನ್ನ ಅಣ್ಣಂದಿರಂತೆ ನಾನು ವಿದ್ಯಾರ್ಥಿ ಭವನದಲ್ಲಿ ಆಸರೆ ಪಡೆಯಬೇಕಾಗಿರಲಿಲ್ಲ. ನನ್ನ ಜತೆಗೆ ಹಾಯ್‌ಸ್ಕೂಲ್ ಓದಿದ ಮೂವರು, ನಾಲ್ವರು

1 ಹುಚ್ಚು ಮನಸ್ಸಿನ ಹತ್ತು ಮುಖಗಳು (ಎರಡನೆ ಮುದ್ರಣ 1965) ಪುಟ 3
2 ನನ್ನ ಜೀವನ ಸ್ಮೃತಿಗಳು: (1974), ಆಲೂರ ವೆಂಕಟರಾಯರು.

ಕೂಡ ಅದೇ ಕಾಲೇಜಿಗೆ ಸೇರಿದ್ದರು. ಅಲ್ಲಿನ ಉಳಿದ ವಿದ್ಯಾರ್ಥಿಗಳೆಲ್ಲರೂ ನನಗೆ ಅಪರಿಚಿತರು; ಹೊರಗಿನಿಂದ ಬಂದವರು. ಪ್ರಾಧ್ಯಾಪಕ ವರ್ಗದಲ್ಲಿ — ಮೂವರು ನಾಲ್ವರು ಸ್ಥಳಿಕರು, ಉಳಿದವರು ಮಲಬಾರಿನವರು, ತಮಿಳುನಾಡಿನವರು. ಈ ಕಾಲೇಜು ಆವರಣದಲ್ಲಿ ಎರಡು ತಿಂಗಳ ಕಾಲ ಕಳೆಯುವಾಗಲೇ ಕಾಲೇಜಿನ ಪಠ್ಯಕ್ರಮದಲ್ಲಿ ನನಗೆ ಬೇಸರ ಬರತೊಡಗಿತು. ಇಲ್ಲಿಂದ ಇನ್ನಾವಲ್ಲಿಗಾದರೂ ಜಿಗಿದರಾಗದೇ — ಎಂಬ ಹಂಬಲ ಕಾಣಿಸಿತು. ರವೀಂದ್ರನಾಥ ಠಾಕೂರರ ಬರಹಗಳನ್ನು ಅರ್ಥವಾಗಿಯೋ, ಆಗದೆಯೋ ಓದಿಕೊಂಡದ್ದರ ಫಲವಾಗಿ, ಅವರ ಶಾಂತಿನಿಕೇತನ ಸಂಸ್ಥೆಯೊಡನೆ ಪತ್ರವ್ಯವಹಾರ ತೊಡಗಿದೆ. ಆ ಸಂಸ್ಥೆಯನ್ನು ಕುರಿತ ಪರೋಕ್ಷ ಕೀರ್ತಿ ಅದಕ್ಕೆ ಕಾರಣವಾಗಿದ್ದಿರಬೇಕು. ಅಲ್ಲಿಗೆ ಬರಬಹುದು — ಎಂದು ಆ ಸಂಸ್ಥೆಯ ಪರವಾಗಿ ಸಿ.ಎಫ್. ಎಂಡ್ರೂಸ್ ಎಂಬವರು ನನಗೆ ಕಾಗದ ಬರೆದರು. ಆ ಕಾಲಕ್ಕೆ ರವೀಂದ್ರನಾಥ ಠಾಕೂರರಂತೆ, ಎಂಡ್ರೂಸ್ ಅವರ ಹೆಸರೂ ಭಾರತದಲ್ಲಿ ಪ್ರಸಿದ್ಧಿ ಪಡೆದಿತ್ತು. ನಾನು ಅಲ್ಲಿ ಹೋಗಿ ಯಾವ ವಿಷಯವನ್ನು ಕಲಿಯುವುದು — ಎಂಬ ಸಮಸ್ಯೆ ಬಂದಾಗ, ಇಲ್ಲಿನ ಪಠ್ಯಕ್ರಮಗಳಿಗೂ ಅಲ್ಲಿನದಕ್ಕೂ ಹೊಂದಿಕೆ ಇಲ್ಲದಿದ್ದುದು ಕಾಣಿಸಿತು. ಎಂಡ್ರೂಸರವರು ತಮ್ಮಲ್ಲಿ — ಪಾಲಿ, ಅರ್ಧ ಮಾಗಧಿ, ಭಾಷೆಗಳನ್ನು ಓದುವ ಅವಕಾಶವಿದೆ — ಎಂದು ತಿಳಿವಳಿಕೆ ತಿಳಿಸಿದ್ದರು. ಈ ಭಾಷೆಗಳು.ನನಗೆ ಏನನ್ನು ಕೊಟ್ಟಾವು — ಎಂಬ ತಿಳಿವಳಿಕೆ ನನಗಿಲ್ಲದಿದ್ದರೂ, ಶಾಂತಿನಿಕೇತನಕ್ಕೆ ಹೋಗಬೇಕೆಂಬ ಬಯಕೆ ನನ್ನದಿತ್ತು. ಆ ಬಗ್ಗೆ ನಾನು ತಂದೆಯೊಡನೆ ಪತ್ರವ್ಯವಹಾರ ಮಾಡಿದೆ. ಅವರಿಗೆ ಬಂಗಾಲ ದೇಶ ದೂರವೆನಿಸದೆ ಹೋದರೂ ಬಂಗಾಲಿಗಳ ಜತೆಯಲ್ಲಿ ನಾನಿರುವುದು ಅಷ್ಟು ಹಿತವಾಗಿ ಕಾಣಿಸಲಿಲ್ಲ. ಮತ್ತೇತಕ್ಕಲ್ಲ, ಮಡಿವಂತ ಸಮಾಜದಲ್ಲಿ ಹುಟ್ಟಿದ ನಾನು, ಮತ್ಸ್ಯಾಹಾರಿಗಳಾದ ಬಂಗಾಲಿಗಳ ಜತೆಯಲ್ಲಿ ಇರುವುದೇ! ...... ಎಂಬ ಸಮಸ್ಯೆ ಕಾಡಿತ್ತು.

ಮುಂದೆ ಒಂದೆರಡು ತಿಂಗಳೊಳಗಾಗಿ ಮಂಗಳೂರಿಗೆ ಮಹಾತ್ಮಾಗಾಂಧಿಯವರು ಖಿಲಾಫತ್ತು ಚಳವಳದ ಸಲುವಾಗಿ ಅಲಿ ಸಹೋದರರೊಡನೆ ಬಂದರು. ಆ ಹೊತ್ತಿನಲ್ಲಿ ನಮ್ಮ ದೇಶದ ರಾಜಕೀಯ ವಾತಾವರಣದಲ್ಲಿ ಮೊದಲ ಬಾರಿಗೆಂಬಂತ ವಿಶೇಷ ಕ್ರಾಂತಿಯ ಚಿಹ್ನೆಗಳು ಕಾಣಿಸುವುವು. ಗಾಂಧೀಜಿ ಅಸಹಕಾರ ಚಳವಳದ ಪ್ರಶ್ನೆಯನ್ನು ಎತ್ತಿದ್ದರು. ಆಗಿನ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸುವ ಸಲಹೆ ಮಾಡಿದ್ದರು. ನಾನು ಫೋರ್ತ್ ಫಾರ್ಮ್ ಓದುತ್ತಿದ್ದಾಗ — ಏನಿಬೆಸೆಂಟ್‌ರವರ ಚಳವಳದಿಂದ ದೇಶೀಯ ವಿದ್ಯಾಭ್ಯಾಸದ ಮೋಹಕ್ಕೆ ಗುರಿಯಾದ ಅಂಕುರ, ಗಾಂಧೀಜಿಯ ಉಪನ್ಯಾಸಗಳಿಂದ ಇನ್ನಷ್ಟು ಬೆಳೆಯುವುದಕ್ಕೆ ಅವಕಾಶವಾಯಿತು. ಕಾಲೇಜಿನ ಪಠ್ಯಕ್ರಮ ಏನೂ ರುಚಿಸದಾಯಿತು: ರಾಜಕೀಯದ ಗೀಳು ಹೆಚ್ಚಿತು. ಮನಸ್ಸು ಅನಿಶ್ಚಿತ ಗುರಿಯಿಂದ, ಮಂಗಳೂರಿಗೆ ನಾನು ಬಂದ ಉದ್ದೇಶವನ್ನು ಮರೆತು, ಇನ್ನೆತ್ತೆತ್ತಲೋ ತೊಳಲಾಡಿತು. ಈ ಅವಧಿಯಲ್ಲೇ ಒಂದು ದಿನ ಲೋಕಮಾನ್ಯ ತಿಲಕರವರು ತೀರಿಕೊಂಡರು. ಅವರ ರಾಜಕೀಯ ಪೂರ್ವ ಜೀವನದಿಂದಾಗಿ ಅವರನ್ನು ಕುರಿತ ಸಂತಾಪ ಸೂಚಿ ಸಭೆಗಳು ಎಲ್ಲೆಲ್ಲೂ ಜರುಗಿದುವು. ಅದರಿಂದಲೂ ನನ್ನಲ್ಲಿ ರಾಷ್ಟ್ರೀಯತ್ವದ ಕಲ್ಪನೆ ಕೆರಳುವುದಕ್ಕೆ ಕಾರಣವಾಯಿತು. ಇಂತಹ ವಾತಾವರಣ ಮಂಗಳೂರಿನ ಅನೇಕ ಹಿರಿಯರನ್ನೂ ಕಿರಿಯರನ್ನೂ ಅಶಾಂತಿಗೆ ಗುರಿ ಮಾಡಿತು. ನಾನು ನನ್ನ ಅಣ್ಣನನ್ನಾಗಲೀ, ತಂದೆಯನ್ನಾಗಲೀ ಕೇಳದೆ, ಅಸಹಕಾರ ಚಳವಳಕ್ಕೆ ಧುಮುಕುವ ನಿಶ್ಚಯವನ್ನು ಮಾಡಿ 1921 ಫೆಬ್ರವರಿಯ ಮಧ್ಯಾವಧಿಯಲ್ಲಿ ಕಾಲೇಜನ್ನು ಬಿಟ್ಟು ಮನೆಗೆ ಬಂದೆ. ದೇಶದ ಭವಿಷ್ಯ ಮತ್ತು ಸ್ವಾತಂತ್ರ್ಯ ನನ್ನ ವೈಯುಕ್ತಿಕ ಜೀವನಕ್ಕಿಂತ ದೊಡ್ಡದು — ಎಂಬ ಅಸ್ಪಷ್ಟ ಮನೋಭಾವ ನನ್ನಲ್ಲಿ ಬೆಳೆದುದರ ಫಲ ಅದು.

ಇನ್ನು ಮುಂದಿನ ಕೆಲವು ವರ್ಷಗಳ ಜೀವನವು ಈ ಆಂದೋಲನಕ್ಕೆ ಸಂಬಂಧಪಟ್ಟದ್ದೇ ಹೊರತು, ಶಿಕ್ಷಣಕ್ಕೆ ಸಂಬಂಧಪಟ್ಟದ್ದಲ್ಲ. ಕಾಲೇಜನ್ನು ಬಿಟ್ಟವನೇ ಕುಂದಾಪುರಕ್ಕೆ ಮರಳಿ ಬಂದು ಗಾಂಧೀಜಿಯ ಸಂದೇಶವನ್ನು ಹಬ್ಬಿಸುವ ಕೆಲಸ ಕೈಕೊಂಡೆ. ಖಾದಿ ಉತ್ಪನ್ನ ಮಾಡಿದೆ; ಮಾರಿದೆ; ಊರಲ್ಲೆಲ್ಲಾ ಅಲೆದಾಡಿದೆ; 'ವಸಂತ' ಎಂಬ ಮಾಸ ಪತ್ರಿಕೆಯನ್ನು ತೊಡಗಿದೆ. ಇವುಗಳ ಕಷ್ಟ ನಷ್ಟಗಳನ್ನು ಹೊತ್ತು ಬೇಕಷ್ಟು ಸಮಯ ಕಳೆದೆ. ಅನಂತರ ನನ್ನ ಮಾನಸಿಕ ಜೀವನದಲ್ಲಿ ಕಾಣಿಸಿಕೊಂಡ ಕೆಲವೊಂದು ಅಭಿರುಚಿಗಳಿಂದಾಗಿ, ಕರ್ನಾಟಕದ ಒಳಗೂ ಹೊರಗೂ ಬೇಕಷ್ಟು ಅಲೆದಾಡಿದೆ. ಈ ಅವಧಿಯಲ್ಲಿ ಮಂಗಳೂರಿನಲ್ಲಿ ಸರಕಾರೀ ಶಿಕ್ಷಣಕ್ಕೆ ಪ್ರತಿಯಾಗಿ ರಾಷ್ಟ್ರೀಯ ಪಾಠ ಶಾಲೆಯನ್ನು ದಿ.ಕಾರ್ನಾಡು ಸದಾಶಿವರಾಯರೂ ಅವರ ಮಿತ್ರರೂ ನಡೆಯಿಸುತ್ತಿದ್ದರು. ಅದರ ಒಂದು ಚಟುವಟಿಕೆ ಖಾದಿ ಉತ್ಪನ್ನಕ್ಕೆ ಅನ್ವಯಿಸಿದರೆ, ಉಳಿದವು ದೇಶಭಕ್ತಿ ಪ್ರಚೋದಕ ವಿಷಯಗಳಿಗೆ ಸೀಮಿತವಾಗಿದ್ದವು. ಅವರ ಶಿಕ್ಷಣಾಲಯದಲ್ಲಿ ವಿಜ್ಞಾನ ವಿಷಯಗಳ ಶಿಕ್ಷಣದ ರೀತಿ ಹೇಗೆ ಇತ್ತೆಂಬುದರ ಅರಿವು ನನಗೆ ಇರಲಿಲ್ಲ.

ಒಮ್ಮೆ ನಾನು ಅಹಮ್ಮದಾಬಾದಿನ ಬಳಿಯಲ್ಲಿ ಗಾಂಧೀಜಿ ಸ್ಥಾಪಿಸಿದ ಸಾಬರಮತಿ ಆಶ್ರಮವನ್ನು ಹೋಗಿ ನೋಡಿದ್ದೆ. ಅಲ್ಲೊಂದು ಹದಿನೈದು ದಿನ ಕಳೆದಿದ್ದೆ. ಅವರು ತಮ್ಮ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದ ಸಾಮಾಜಿಕ ದೃಷ್ಟಿ ಮತ್ತು ನೈತಿಕ ದೃಷ್ಟಿ ರಾಜಕೀಯ ದೃಷ್ಟಿಗಳು ಅಪ್ಪಟ ನಿಜವೆಂಬ ನಂಬಿಕೆಯಿಂದ ನಾನು ಮಾನಸಿಕವಾಗಿ ಅವನ್ನು ಎರವಲು ಪಡೆದಿದ್ದೆ. ಇದರ ಪರಿಣಾಮವಾಗಿ ಬ್ರಿಟಿಷರಿಂದ ಪ್ರಚಲಿತವಾದ ಶಿಕ್ಷಣ ಕ್ರಮ ವ್ಯರ್ಥ, ಭಾರತವನ್ನು ಕಟ್ಟಬೇಕಾದರೆ ಹೊಸ ಶಿಕ್ಷಣ ಪದ್ಧತಿಯೇ ಬೇಕು, ಅದು ರಾಷ್ಟ್ರೀಯತ್ವವನ್ನು ಬೋಧಿಸುವಂತಿರಬೇಕು — ಎಂಬ ಸ್ಥೂಲ ಕಲ್ಪನೆಯಷ್ಟೇ ನನಗಿದ್ದಿತು. ವಿದ್ಯಾರ್ಥಿಯಾಗುವ ಬಯಕೆಯೂ ಇಲ್ಲದ, ಉಪಾಧ್ಯಾಯನಾಗುವ ಬಯಕೆಯೂ ಇಲ್ಲದ ನನ್ನಲ್ಲಿ ಆ ಕುರಿತು ಹೆಚ್ಚಿನ ಕುತೂಹಲ ಅಥವಾ ಅನ್ವೇಷಣಾ ಬುದ್ಧಿಯು ಆ ಕಾಲಕ್ಕೆ ಕಾಣಿಸಿಯೇ ಇರಲಿಲ್ಲ. ಆದರೆ ಈಗಿನ ಶಾಲಾಕಾಲೇಜುಗಳಿಗಿಂತ ಭಿನ್ನವಾದ, ಪುರಾತನ ಕಾಲದಲ್ಲಿ ಇತ್ತೆಂಬ, 'ಆಶ್ರಮ ಶಿಕ್ಷಣ' ಪದ್ಧತಿಯೊಂದು ಬೇಕೆನ್ನುವ ಸ್ಪಷ್ಟ ಕಲ್ಪನೆ ಇಲ್ಲದ ಒಂದು ಭಾವನೆಯೇನೋ ಮೊಳೆತಿತ್ತು.

ವಿವಿಧ ಕಾರಣಗಳಿಂದ ಅಲೆದಾಡುತ್ತಿದ್ದ ನನಗೆ, 1930ರೊಳಗಾಗಿ ಅನೇಕ ಮಿತ್ರರ ಪರಿಚಯವಾಗಿತ್ತು. ಈ ಪರಿಚಯ ಕಲೆಯ ದೃಷ್ಟಿಯಿಂದಲೋ, ಗಾಂಧೀ ವಾದಸರಣಿಯ ದೆಸೆಯಿಂದಲೋ ಉಂಟಾದದ್ದು. ಈ ಕಾಲದ ಪರಿಚಿತರಲ್ಲಿ ಒಬ್ಬರ ವಿಷಯವನ್ನು ಇಲ್ಲಿ ಒತ್ತಿಹೇಳಬೇಕಾಗುತ್ತದೆ. ನನಗೆ ಆಪ್ತಮಿತ್ರರಾಗಿದ್ದ ಕೆ.ಶ್ರೀನಿವಾಸಾಚಾರ್ಲು ಎಂಬವರು ಆ ಕಾಲಕ್ಕೆ ದಾವಣಗೆರೆಯಲ್ಲಿ ಸರಕಾರ ಹೊಸತಾಗಿ ತೆರೆದಿದ್ದ ಜಾಯ್‌ಸ್ಕೂಲಿನ ಹೆಡ್ಮಾಸ್ಟರಾಗಿದ್ದರು. ಸಾಕಷ್ಟು ಕಾಲ ನಾನು ಅವರ ಸ್ನೇಹ ಬೆಳೆಸಿದ್ದೆ. ಶಿಕ್ಷಣ ಅವರ ವೃತ್ತಿ; ಗಾಂಧೀಜಿ ಅವರ ಆದರ್ಶ. ಹಾಗಿದ್ದರೂ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಅವರ 'ಡಾಲ್ಟನ್' ಮೊದಲಾದ ಪಾಶ್ಚಾತ್ಯರ ಪದ್ಧತಿಗಳನ್ನು ಕುರಿತು ಓದುತ್ತಿದ್ದರು. ಶಿಕ್ಷಣ ಸಂಬಂಧದ ಪತ್ರಿಕೆಗಳನ್ನು ತರಿಸುತ್ತಿದ್ದರು. ಅವರು ತರಿಸುತ್ತಿದ್ದ ಪತ್ರಿಕೆಗಳಲ್ಲಿ ಸ್ವಿಟ್ಸರ್‌ಲೆಂಡಿನ ಪ್ರೊಫೆಸರ್ ಸಿಜೆಕ್ ಎಂಬವರು ಸಂಪಾದಿಸುತ್ತಿದ್ದ 'ನ್ಯೂ ಇರಾ' ಎಂಬುದೊಂದು ಪತ್ರಿಕೆಯಿತ್ತು. ಆ ಪತ್ರಿಕೆಯ ಬರವಣಿಗೆಗಳು ನನ್ನಲ್ಲಿ ಮಕ್ಕಳ ಶಿಕ್ಷಣವನ್ನು ಕುರಿತು, ಸಿಜೆಕರು ನಡೆಸುತ್ತಿದ್ದ ಅನೇಕ ಪ್ರಯೋಗಗಳನ್ನು ಕುರಿತು ಕುತೂಹಲ ಮೂಡಿಸಿದುವು. ಈ ಪ್ರಚೋದನೆ ಎಳೆಯರ ಶಿಕ್ಷಣದ ವಿಚಾರದಲ್ಲಿ ನನ್ನಲ್ಲಿ ವಿಶೇಷ ಆಸಕ್ತಿಯನ್ನು ಕೆರಳಿಸಿತು.

ವಸಂತ ಮಾಸಪತ್ರಿಕೆಯನ್ನು ಮಂಗಳೂರಿನಲ್ಲಿ ಇದ್ದು ನಡೆಸುತ್ತಿದ್ದ ಕಾಲದಲ್ಲಿ ನನಗೆ ಪಡುಕೋಣೆ ರಮಾನಂದರಾವ್ ಎಂಬ ಕೆಮಿಸ್ಟ್ರಿ ಪ್ರಾಧ್ಯಾಪಕರ ಪರಿಚಯವಾಯಿತು. ನನ್ನ, ಅವರ ನಾಟಕಾಭಿರುಚಿಯಿಂದಾಗಿ, ನಮ್ಮಲ್ಲಿ ಸ್ನೇಹ ಬೆಳೆದು, ಅವರ ಮನೆಯಲ್ಲೇ ನಾನು ಹೆಚ್ಚಿನ ಸಮಯ ಕಳೆಯ ತೊಡಗಿದೆ. ಇದು ಇನ್ನೊಂದು ಗಾಢ ಪರಿಚಯಕ್ಕೆ ಅವಕಾಶ ಮಾಡಿಕೊಟ್ಟಿತು. ದೀರ್ಘಕಾಲ ಪುತ್ತೂರಿನಲ್ಲಿ ನೆಲೆಸಿದ್ದು, ವಕೀಲರಾಗಿದ್ದು, ಅಲ್ಲಿನ ತಾಲೂಕು ಬೋರ್ಡಿನ ಅಧ್ಯಕ್ಷರಾಗಿದ್ದು, ಈ ಜಿಲ್ಲೆಯ ಸಹಕಾರೀ ಸಂಸ್ಥೆಗಳ ಪಿತಾಮಹರೆನಿಸಿಕೊಂಡಿದ್ದ ಮೊಳಹಳ್ಳಿ ಶಿವರಾಯರು ಎಂಬವರ ಪರಿಚಯ ನನಗೆ ಉಂಟಾಯಿತು. ಅವರು ಪಡುಕೋಣೆ ರಮಾನಂದರಾಯರ ಮಾವಂದಿರು. ಅವರಿಗಾಗಿ ನಾನು ಶಾಲೆ ಮಕ್ಕಳು ಆಡಲು ಅನುಕೂಲಿಸುವ ನಾಟಕಗಳನ್ನು ಬರೆದುಕೊಟ್ಟೆ; ಅವರಿರುವ ಪುತ್ತೂರಿಗೆ ಆಗಾಗ ಹೋಗಿ ಬರತೊಡಗಿದೆ; ಮುಂದೆ ಅಲ್ಲೇ ನೆಲೆಸಿದೆ. ಹೀಗೆ ನೆಲೆಸಿದ ಕಾಲದಲ್ಲಿ ಅವರು ಹಲವಾರು ಪ್ರಾಥಮಿಕ ಶಾಲೆಗಳನ್ನೂ, ಹಾಯರ್ ಎಲಿಮೆಂಟರಿ ಶಾಲೆಗಳನ್ನೂ ನಡೆಸುತ್ತಿದ್ದುದನ್ನು ಕಂಡೆ. ಶಾಲೆಯಲ್ಲಿ ಮಕ್ಕಳ ಜೀವನ ಸಾಕಷ್ಟು ಆನಂದದಾಯಕವಾಗಬೇಕು ಎಂಬ ಮನೋಧರ್ಮ ಅವರದ್ದಿತ್ತು. ಮಕ್ಕಳ ಬಾಹ್ಯ ಚಟುವಟಿಕೆಗಳಲ್ಲಿ ಅವರಿಗೆ ವಿಶೇಷ ಆಸಕ್ತಿಯಿತ್ತು. ಈ ಚಟುವಟಿಕೆಗಳನ್ನು ಬೆಳೆಯಿಸಲು ಏನೇನು ದಾರಿಗಳಿವೆ ಎಂದು ಇಬ್ಬರೂ ಕೂಡಿ ಯೋಚಿಸಿದೆವು. ಮಕ್ಕಳಿಗೆ ಹರ್ಷತರುವ ಶಾಲಾ ವರ್ಧಂತಿಯನ್ನು ವರ್ಷಕ್ಕೊಮ್ಮೆ ಮಾಡುವ ಬದಲು, ಮಕ್ಕಳು ತಮ್ಮ ವೈಯಕ್ತಿಕ ಕ್ರಿಯಾಶಕ್ತಿಯನ್ನು ಬೆಳೆಯಿಸುವ ಸಲುವಾಗಿ ತಿಂಗಳಿಗೊಂದು ಹಬ್ಬ ಮಾಡುವಂತೆ ಬೋಧಿಸಿದೆವು. ಶಾಲಾ ಪತ್ರಿಕೆಗಳನ್ನು ಹೊರಡಿಸಲು ಪ್ರೇರಣೆ ಕೊಟ್ಟೆವು. ಈ ಅವಧಿಯಲ್ಲಿ ಶಿವರಾಯರು ಪುತ್ತೂರು ತಾಲೂಕಿನ ಉಪಾಧ್ಯಾಯರ ಸಮ್ಮೇಳನವೊಂದನ್ನು ಜರಗಿಸಲು ಯೋಚಿಸಿದರು. ಅದಕ್ಕೆ ಒಬ್ಬ ಯೋಗ್ಯ ಅಧ್ಯಕ್ಷ ಬೇಕು — ಎಂದು ಬಯಸಿದಾಗ, ಆ ಕಾಲಕ್ಕೆ ನಾನು ಕೇಳಿ ತಿಳಿದಿದ್ದ ಮೈಸೂರಿನ ವಿದ್ಯಾ ಇಲಾಖೆಯ ಡೈರೆಕ್ಟರಾಗಿದ್ದ 'ಎನ್.ಎಸ್.ಸುಬ್ಬರಾವ್ ಎಂಬವರಾಗಬಹುದು' ಎಂಬ ಸಲಹೆ ಕೊಟ್ಟೆ. ಅವರನ್ನು ಮಾತನಾಡಿಸುವ ಹೊಣೆಯನ್ನು ನನಗೇ ಒಪ್ಪಿಸಿದರು. ನನ್ನ ಬೆಂಗಳೂರು ಮಿತ್ರರ ಮಧ್ಯಸ್ಥಿಕೆಯಿಂದ ನಾನು ಸುಬ್ಬರಾಯರನ್ನು ಕಂಡೆ; ಅವರು ಪುತ್ತೂರಿಗೆ ಬರಲೊಪ್ಪಿದರು. ಭರ್ಜರಿ ವಿದ್ಯಾ ಸಮ್ಮೇಳನವೊಂದು ಪುತ್ತೂರಿನಲ್ಲಿ ಜರಗಿತು. ಆ ಕಾಲದ ಒಂದು ಸಣ್ಣ ಘಟನೆಯನ್ನು ತುಸು ದೊಡ್ಡದು ಮಾಡಿಯೇ ಇಲ್ಲಿ ಹೇಳಬೇಕಾಗುತ್ತದೆ.

ಸಭೆ ಸಮ್ಮೇಳನಗಳೆಂಬವು ಸದಾ ಕಾರ್ಯಪ್ರವರ್ತಕರಾದ ಶಿವರಾಯರಿಗೆ ನೀರು ಕುಡಿದಷ್ಟು ಸುಲಭದವು. ಇಂಥವಕ್ಕೆ ಬೇಕಾದ ಪ್ರತಿಯೊಂದು ಏರ್ಪಾಟನ್ನೂ ತಾವೇ ನಿಂತು, ನೋಡಿ, ಮಾಡಿಸುವ ಸ್ವಭಾವ ಅವರದ್ದು. ಆ ಕಾಲದ ಶಿವರಾಯರ ಉಡುಗೆ ತೊಡುಗೆ, ಜನಸಾಮಾನ್ಯರಿಂದ ಅವರನ್ನು ಪ್ರತ್ಯೇಕಿಸಿ ತೋರಿಸಲಾರದಂಥವು. ಅಂಥವರ ಊರಿಗೆ ಎನ್.ಎಸ್.ಸುಬ್ಬರಾಯರು, ಕೇಂಬ್ರಿಜ್ ವಿಶ್ವವಿದ್ಯಾಲಯದ ಪದವೀಧರರು, ತಮ್ಮ ಐರೋಪ್ಯ ಪೋಷಾಕಿನಲ್ಲಿ ಭರ್ಜರಿ ಜರತಾರಿ ಮುಂಡಾಸು ತೊಟ್ಟು ಬಂದಿದ್ದರು. ಸುಬ್ಬರಾಯರು ತಮ್ಮ ಕಂಪೌಂಡಿನಲ್ಲಿ ಹೊರಗೆ ಕಾಲಿಟ್ಟಾಗಲೆಲ್ಲ ಅಂಥ ವೇಷಭೂಷಣ ತೊಟ್ಟು ಹೊರಬೀಳುವವರು. ಹಾಗೆ ಬಂದ ಸುಬ್ಬರಾಯರು ಪುತ್ತೂರು ಬಂಗ್ಲೆಯಲ್ಲಿ, ಸರಳ ಉಡುಗೆ ತೊಡುಗೆಯ ಶಿವರಾಯರನ್ನು ಕಂಡು ಮಾತನಾಡಿ, ಮೆಚ್ಚಿ ಸಮ್ಮೇಳನದ ಬಗ್ಗೆ ದೀರ್ಘ ಸಂಭಾಷಣೆಯನ್ನು ನಡೆಸಿದರು.

ಮರುದಿನದ ಸಮ್ಮೇಳನದಲ್ಲಿ, ಅದೇ ಸುಬ್ಬರಾಯರು ಶಿವರಾಯರಂತೆಯೇ ಸರಳ ವೇಷ ತೊಟ್ಟು, ಅವರ ಜತೆಯಲ್ಲಿಯೇ ಸಮ್ಮೇಳನದಲ್ಲಿ ಕುಳಿತು ಭಾಗವಹಿಸಬೇಕಾದರೆ ಶಿವರಾಯರ ವ್ಯಕ್ತಿತ್ವದ ಪ್ರಭಾವ ಯಾವ ರೀತಿಯದು ಎಂದು ನೀವೇ ಊಹಿಸಬಹುದು.

ಸಭೆ ಸಮ್ಮೇಳನಗಳಲ್ಲಿ ಅಷ್ಟೊಂದು ಅಭಿರುಚಿ ಇಲ್ಲದವನು ನಾನು. ಬರಿಯ ಒಬ್ಬ ಪ್ರೇಕ್ಷಕನಾಗಿ ಉಪಾಧ್ಯಾಯರ ಗೋಳಿನ ಕಥಾನಕ ಕೇಳುತ್ತ ಉದಾಸೀನನಾಗಿಯೇ ಇದ್ದೆ. ಆದರೆ ಅದರ ಪರಿಣಾಮ — ನನ್ನ ಮನಸ್ಸಿನಲ್ಲಿ ಬೇರೊಂದು ತೆರನಾಗಿ ಮೂಡಿತು. ಈ ಸಮ್ಮೇಳನ ಮುಗಿದ ಮೇಲೆ ಒಂದು ದಿನ ನಾನು ಶಿವರಾಯರೊಡನೆ 'ನಿಮ್ಮ ಉಪಾಧ್ಯಾಯರ ಸಮ್ಮೇಳನ ಮುಗಿಯಿತಲ್ಲ; ಯಾತಕ್ಕೆ ನಾವು ಶಾಲಾ ಮಕ್ಕಳ ಸಮ್ಮೇಳನ ಮಾಡಬಾರದು?' ಎಂದು ಪ್ರಶ್ನೆ ಮಾಡಿದೆ. ಅದಕ್ಕೆ ಅವರ ಉತ್ತರ — 'ಮಾಡುವ, ಏನಾಗಬೇಕೆಂದು ಹೇಳು. ಯಾವ ಕಷ್ಟವೂ ಇಲ್ಲ' ಎಂದರು.

ಅದರ ತಯಾರಿಕೆಯ ಹೊಣೆ ನನ್ನದಿತ್ತು. ಅವರು ನಡೆಯಿಸುತ್ತಿದ್ದ ಯಾವತ್ತು ಶಾಲೆಗಳಲ್ಲಿ ನನಗೆ ಎಂದು ಬೇಕಾದರಂದು ಪ್ರವೇಶವಿದ್ದಿತ್ತು. ಅಲ್ಲಿನ ಎಲ್ಲ ಉಪಾಧ್ಯಾಯರ ಪರಿಚಯವಿದ್ದಿತ್ತು. ಯಾಕೆ ಸಮ್ಮೇಳನ — ಎಂದು ನಾನು ಕಂಡು ಹಿಡಿಯ ಬೇಕಾಗಿತ್ತು; ಆ ಬಳಿಕ ಅದರ ಕಾರ್ಯಕ್ರಮವನ್ನು ರೂಪಿಸಬೇಕಾಗಿತ್ತು. ಆದರೆ, ಮಕ್ಕಳ ಸಮ್ಮೇಳನದ ಉದ್ದೇಶ ತಿಳಿಯುವುದಕ್ಕೆ ನನಗೆ ಕಷ್ಟವೆನಿಸಲಿಲ್ಲ. ಪ್ರೊಫೆಸರ್ ಸಿಜೆಕ್‌ನ ಪ್ರಯೋಗಗಳು ಮಕ್ಕಳ ಸುಪ್ತ

ಶಕ್ತಿ ಎಷ್ಟೆಂದು ಸೂಚಿಸಿದ್ದುವು. ಅದು ಯೂರೋಪಿನಲ್ಲಿ! ನಮ್ಮ ಜಿಲ್ಲೆಯ ಇಲ್ಲವೆ ಪುತ್ತೂರು ತಾಲೂಕಿನ ಮಕ್ಕಳು ಎಂಥವರು? ಅವರಲ್ಲಿ ಎಂಥೆಂಥ ಸುಪ್ತ ಶಕ್ತಿಗಳಿವೆ? ಇರಲು ಸಾಧ್ಯ — ಎಂಬುದನ್ನು ನಾನು ಕಂಡುಕೊಳ್ಳ ಬೇಕಾಗಿತ್ತು. ಶಾಲಾ ಪಠ್ಯಕ್ರಮದ ಚಟುವಟಿಕೆಗಳಲ್ಲಿ ಯಾವ ಬಾಲಕ ಹೇಗೆ ಎಂದು ಉಪಾಧ್ಯಾಯರು ತಿಳಿಸಬಲ್ಲರು. ಅವೇ ಪುತ್ತೂರು ತಾಲೂಕಿನ ಶಾಲಾ ಮಕ್ಕಳು ನಡೆಸುತ್ತಿದ್ದ ಮಾಸ ಪತ್ರಿಕೆಗಳಲ್ಲಿ, ಮಕ್ಕಳ ಮನಸ್ಸಿನ ರೀತಿಗಳನ್ನು ಸ್ವಲ್ಪವಾದರೂ ಗುರುತಿಸಲು ನನಗೆ ಸಾಧ್ಯವಾಗಿತ್ತು. ಅವರ ಸ್ವಂತ ಚಟುವಟಿಕೆಗಳ ನಡುವೆ ಉಪಾಧ್ಯಾಯರು ಕೈ ಹಾಕಿದಲ್ಲಿ ಏನಾಗುತ್ತದೆ — ಎಂಬುದರ ಗುಣದೋಷಗಳು ಶಾಲಾ ಪತ್ರಿಕೆಗಳಲ್ಲಿಯೂ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಚಿತ್ರ ಬರೆಯುವುದಿರಲಿ, ಕಥೆ ಬರೆಯುವುದಿರಲಿ, ವಿಷಯ ಹೇಳುವುದಿರಲಿ — ಕಿರಿಯರು ತಮ್ಮ ಮನಸ್ಸನ್ನು ತೋಡಿಕೊಳ್ಳುವುದಕ್ಕೆ ಬಯಸದೆಯೆ ದೊಡ್ಡವರ ಅನುಕರಣೆಯಿಂದ, ಸ್ವಂತ ಶಕ್ತಿಯನ್ನು ಮರೆಯುತ್ತಿದ್ದುದು ಅವರ ಚಿತ್ರ ಮತ್ತು ಬರಹಗಳಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತಿತ್ತು.

ಈ ಕಾರಣಗಳಿಂದಾಗಿ ನಾನು ಯೋಜಿಸಬಹುದಾದ ಮಕ್ಕಳ ಸಮ್ಮೇಳನವು — ಭಾಷಣ, ಠರಾವುಗಳ ಮಾದರಿಯ, ಹಿರಿಯರ ಸಮ್ಮೇಳನದ ಇನ್ನೊಂದು ಅನುಕರಣೆ ಆಗಲೇ ಬಾರದು — ಎಂದುಕೊಂಡೆ. ಅದು 'ಮಕ್ಕಳದ್ದೇ ಕೂಟ' ಆಗಬೇಕಾಗಿದೆ. ದೊಡ್ಡವರನ್ನು ಅನುಕರಿಸದೆ, ಮಕ್ಕಳು ತಮ್ಮತನವನ್ನು ತೋಡಿಕೊಳ್ಳುವುದಕ್ಕೆ ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸಿ ನಡೆಯಿಸಬೇಕಾದ ಕಾರ್ಯಕ್ರಮವದು. ಇಂಥವನ್ನು ಒಂದು ಕೂಟ ಜರುಗಿಸಿ ಆ ಮೇಲೆ ಗೊತ್ತು ಹಚ್ಚುವ ಬದಲು, ಮೊದಲಿಗೇ ನಾನು ತಿಳಿದುಕೊಂಡು, ಆ ಮಕ್ಕಳ ಕೂಟದ ರೂಪರೇಷೆಗಳ ನಿರ್ಧಾರ ಮಾಡುವ ಪ್ರಸಂಗ ಒದಗಿತು.

ಈ ಕೆಲಸಕ್ಕಾಗಿ ನಾನು ಪುತ್ತೂರು ತಾಲೂಕಿನ ಏಳೆಂಟು ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಹೋಗಿ, ಒಂದೊಂದು ಶಾಲೆಯಲ್ಲೂ ಮೂರು, ನಾಲ್ಕು ದಿನ ಕಳೆದೆ. ಶಿವರಾಯರ ಗೆಳೆಯ ನಾನು — ಎಂಬುದರಿಂದ ನನಗೆ ಬೇಕಾದ ತರಗತಿಯನ್ನು, ಸಮಯವನ್ನು ಉಪಾಧ್ಯಾಯರು ಬಿಟ್ಟುಕೊಟ್ಟು, ನನ್ನ ಜತೆಯಲ್ಲಿ ಕುಳಿತು ನೋಡತೊಡಗಿದರು. ಹೀಗೆ ಎರಡು ತಿಂಗಳ ಕಾಲ ನಾನು ಅಲ್ಲಿನ ಮಕ್ಕಳೊಡನೆ ಸಮಯವನ್ನು ಕಳೆದೆ.

ಅವರಿಂದ ಕಥೆ ಹೇಳಿಸಿದೆ, ವಾಕ್ಯ ಶುದ್ಧವಾಗಿ, ಪೂರ್ಣವಿರಾಮ, ಅರ್ಧ ವಿರಾಮ, ಬಿಡದೆ ಮಕ್ಕಳು ಕಥೆ ತೊಡಗುತ್ತಲೆ — 'ಆ ಕಥೆ ಸಾಕು, ನಿನ್ನ ಅಜ್ಜಿ ನಿನಗೆ ಕಥೆ ಹೇಳುವ ರೀತಿಯಲ್ಲಿ, ಅಥವಾ ನೀನು ನಿನ್ನ ದೋಸ್ತಿಗೆ ಹೇಳುವ ರೀತಿಯಲ್ಲಿ ಕಥೆ ಹೇಳಿದರೆ ಕೇಳುತ್ತೇನೆ, ಇಲ್ಲವಾದರೆ ಬೇಡ' ಎನ್ನಬೇಕಾಯಿತು. ಆ ಕಾಲಕ್ಕೆ ಒಬ್ಬಿಬ್ಬರು ಬಾಲಕರು ಸ್ವಂತ ಉತ್ಸಾಹದಿಂದ, ಕಥೆ ಹೇಳುವ ಲವಲವಿಕೆಯಿಂದ ಕಥೆ ತೊಡಗಿ, ಮುಗಿಸಿದ ರೀತಿ ಅಷ್ಟೊಂದು ಮೋಹಕವಾಗಿತ್ತು. ಆ ಹೇಳುವಿಕೆಯಲ್ಲಿ ಧ್ವನಿಯಏರಿಳಿತಗಳು, ಮುಖ ಮತ್ತು ಅಂಗಾಂಗ ಭಾವಗಳು, ಹೇಳುವವನಲ್ಲಿ ಮತ್ತು ಕೇಳುವವನಲ್ಲಿ ಉಂಟಾಗುವ ತದಾತ್ಮ್ಯತೆ — ಇವುಗಳ ರೂಪವೇ ಬೇರೆಯೆನಿಸಿತು. ಕಥೆ ಹೇಳುವುದೂ ಕೂಡ ಒಂದು ಶ್ರಮದ ಕೆಲಸ. ಶಾಲಾ ಪ್ರಬಂಧದಷ್ಟು ನಿರ್ಜೀವ ವಸ್ತು — ಎನ್ನಿಸುವ ರೀತಿಯೇ ಬೇರೆ.

ಮಕ್ಕಳೊಡನೆ 'ನಿಮಗೆ ಗೊತ್ತಿದ್ದ ಹಾಡನ್ನು ಹೇಳಿ' ಎಂದರೆ ತಿರುಗಿ ಇದೇ ಪಾಡು! ಉಪಾಧ್ಯಾಯರು ಸರಳಾನುವಾದ ಮಾಡಿಸಿ, ಸಂಧಿ ವಿಂಗಡಿಸಿ, ಸರಳ ಪದಗಳಿಗೆ ಕ್ಲಿಷ್ಟಾರ್ಥ ಹೇಳಿ, ಮೇಲಿಂದ ಮೇಲೆ ಕೊಂದು ಸಾಯಿಸಿದ 'ಅಂಬುಜಾನನೆ ಕೇಳು ತಾಂಡವವನ್ನೋ', ಬಿಡಬೇಡ ಆಣೆಯಾ ತಲೆಗೊಂದು ಹೊಡೆಯೈ' ಎಂಬ ಸುಲಭ ಹಾಡನ್ನೋ, ಅವರು ಹಾಡುವಾಗ ನಾನು ಕಲಿತ 'ಏತರಾಯಾಸವಿದು!' ಎಂಬ ಹಾಡಿನ ಸೊಲ್ಲೇ ನೆನಪಾಗುತ್ತಿತ್ತು. ಶಾಲೆಯ ಪಠ್ಯಪುಸ್ತಕಗಳಲ್ಲಿ ಮಕ್ಕಳ ವಯಸ್ಸಿಗೆ, ಮನೋಧರ್ಮಕ್ಕೆ ಪ್ರೀತಿಗೆ ಒಲಿಯುವ ಹಾಡುಗಳ ಕೊರತೆ ತುಂಬಿಕೊಂಡಿತ್ತು. ಅಲ್ಲಿನ ಎಳೆಯರ ಮುಂದೆ ನಾನೂ ಮಕ್ಕಳಂತೆ ಆಗಿ, ಹೊಯ್ಸಳರ ಕವನವನ್ನೋ, ರಾಜರತ್ನಂರವರ ಕವನವನ್ನೋ ಅಥವಾ ಉದ್ದೇಶಪಟ್ಟು ನಾನೇ ಬರೆದ ಹಾಡುಗಳನ್ನೋ ಹಾಡಿ, ಅಭಿನಯಿಸಿ ತೋರಿಸಬೇಕಾಯಿತು. ಈ ಕಾಲದಲ್ಲಿ - ಒಮ್ಮೊಮ್ಮೆ ಹೀಗೆನ್ನುತ್ತಿದ್ದೆ; 'ಸದ್ಯ ನನಗೆ ನಿಮ್ಮ ಶಾಲೆಯ ಹಾಡುಗಳು ಯಾವುವೂ ಬೇಡ; ನಿಮ್ಮ ಸುತ್ತುಮುತ್ತಿನವರು, ಸ್ನೇಹಿತರು ಏನೂ ಹಾಡುವುದಿಲ್ಲವೇ? ಕನ್ನಡವಾದರೆ ಕನ್ನಡ,ತುಳುವಾದರೆ ತುಳು ನಿಮಗೆ ಗೊತ್ತಿದ್ದ ಹಾಡುಗಳನ್ನು ಹೇಳಿ. ಶಾಲೆಯಲ್ಲಿ ಕಲಿಸಿಕೊಟ್ಟದ್ದು ಮಾತ್ರ ಕೂಡದು. ನಿಮ್ಮ ಖುಷಿಯಿಂದ ಕಲಿತದ್ದು ಬೇಕು' ಎಂದೆ. ಆಗ ಎರಡೋ ಮೂರೋ ಮಕ್ಕಳು ಎದ್ದು ನಿಂತು.

'ಈಪೋಳು ಪುಟ್ಟಿನೆಂಬೆಚಣಿಲಣ್ಣ?'
'ಓಮನಂಗೋ ಓಚನಂಗೋ ಪಡ್ಡೆ ಪಡ್ಡೆಪ್ಪೋವಂತಾಯಿಜೆ'
'ಚಿನ್ನಾ ತೂಗಿ ಮೈಬನ ಬಾಗಿ ಸಾಗಿ ಬಾರೋ ಬಣ್ಣದ ನೂಲೇ'

ಎಂಬಿವೇ ತೆರನ, ತಮಗೆ ಗೊತ್ತಿದ್ದ ಹಲವಾರು ಜಾನಪದ ಗೀತೆಗಳನ್ನು ಹಳ್ಳಿಯ ಧಾಟಿಯಲ್ಲಿ ಸೊಗಸಾಗಿ ಹಾಡಿದರು. ಅವರ ಜತೆಯಲ್ಲಿ ನಾನು ನಡೆಸಿದ ಇನ್ನೊಂದು ಮುಖ್ಯ ಪ್ರಯೋಗ — ಚಿತ್ರಕಲೆಗೆ ಸಂಬಂಧಪಟ್ಟದ್ದು. ಡ್ರಾಯಿಂಗ್ ಪಾಠದಿಂದಾಗಿ ಮಕ್ಕಳ ಚಿತ್ರಕಲೆ ಕುಲಗೆಟ್ಟಿತು — ಎಂಬ ಅಭಿಪ್ರಾಯದ ನಾನು, ಅವರ ಮುಂದೆ 'ನೋಡಿ, ನಿಮ್ಮ ಮಾಸ್ತರು ಬೋರ್ಡಿನ ಮೇಲೆಬರೆಯುವ ಕತ್ತೆ, ಕುದುರೆ, ಆನೆಗಳನ್ನು ನೀವು ಬರೆಯಬೇಕಾಗಿಲ್ಲ. ನಿಮಗೆ ಇಷ್ಟಕಂಡ ವಸ್ತುವಿನ ಚಿತ್ರವನ್ನು ಬರೆಯಬೇಕು. ಯಾವುದನ್ನು ಕಂಡರೆ ನಿಮಗೆ ಖುಷಿಯೋ — ಅದನ್ನು ಬರೆಯಿರಿ. ಡ್ರಾಯಿಂಗ್ ಪುಸ್ತಕ, ಪೆನ್ಸಿಲು, ಬಣ್ಣದ ಪೆನ್ಸಿಲುಗಳು ಕೂಡದು. ಬಣ್ಣ ಬಣ್ಣದ ಮಣ್ಣನ್ನು ತಂದು — ನೆಲದ ಮೇಲೆ ಚಿತ್ರ ಬರೆಯಿರಿ. ಬಣ್ಣದ ಕಾಗದಗಳನ್ನು ಕೊಡುತ್ತೇನೆ, ಕತ್ತರಿ ಕೊಡುತ್ತೇನೆ. ಅವನ್ನು ಕತ್ತರಿಸಿ, ಅಂಟಿಸಿ ಚಿತ್ರ ಮಾಡಿ. ಅದೇ ರೀತಿ ಬೇರೆ ಬೇರೆ ತೆರನ ಹೂವು, ಎಲೆಗಳನ್ನು ತಂದು, ಅವುಗಳಿಂದ ಕೋಳಿ, ಗಿಳಿ — ಏನು ಬೇಕಾದರೂ ಚಿತ್ರ ಮಾಡಿರಿ' ಎಂದಂದೆ. ಮಕ್ಕಳು ಮಿಕಿಮಿಕಿ ನೋಡಿದರು. ಒಂದು ದಿನ ಸುಳ್ಯ

ಶಾಲೆಗೆ ಹೋದವನು ಅಲ್ಲಿನ ಮಕ್ಕಳೊಡನೆ 'ನಾಳೆ ಬರುತ್ತಾ ಬಣ್ಣ ಬಣ್ಣದ ಮಣ್ಣುಗಳನ್ನು ತೆಗೆದುಕೊಂಡು ಬನ್ನಿ' ಎಂದೆ. 'ಮಣ್ಣಿನಲ್ಲಿ ಏನು ಬಣ್ಣ' ಎಂದು ಬೆರಗಾದರು ಉಪಾಧ್ಯಾಯರು ಮರುದಿನ ಬೆಳಗ್ಗೆ ಒಬ್ಬ ಹುಡುಗ ಅವರ ಪ್ರಶ್ನೆಗೆ ಸಮಂಜಸವಾದ ಉತ್ತರವನ್ನು ಒದಗಿಸಿದ. ಆತ ಒಬ್ಬನೇ ಹತ್ತೋ ಹದಿನಾರೋ ವರ್ಣವ್ಯತ್ಯಾಸವುಳ್ಳ ಮಣ್ಣುಗಳನ್ನು ತಂದಿದ್ದ. ಮಣ್ಣಿನ ಬಣ್ಣ ಎಳೆಯನಾದ ಅವನನ್ನು ಆಕರ್ಷಿಸಿದ್ದಕ್ಕೆ ಅದು ಸಾಕ್ಷಿ. ಇನ್ನೊಬ್ಬ ಹುಡುಗ 'ನನಗೆ ಗಿಳಿ ಬಿಡಿಸಬೇಕಾದರೆ ಇಂಥ ಬಣ್ಣ ಏನು ಪ್ರಯೋಜನ?' ಎಂದು ಕೇಳಿದ.

ಅದಕ್ಕೆ ನಾನೆಂದೆ 'ನಿಮಗೆ ಸಿಕ್ಕಿದ ಬಣ್ಣಗಳಿಂದ ಆಗುವ ಚಿತ್ರಗಳನ್ನಷ್ಟೆ ಬರೆಯಬೇಕು. ಅಂಗಡಿಯಲ್ಲಿ ಬೇಕಾದ ಬಣ್ಣಗಳು ಸಿಗುತ್ತವೆ. ದುಡ್ಡು ಕೊಟ್ಟು ಅವನ್ನು ತರುವುದಲ್ಲ. ಮಸಿಗೆಂಡ ಪುಡಿಮಾಡಿದರೆ ಕಪ್ಪು ಬಣ್ಣ ಆಗುತ್ತದೆ, ಒಲೆಯ ಬೂದಿ ಬೂದುಬಣ್ಣ ಕೊಡುತ್ತದೆ, ಜಾಜಿಕಲ್ಲು ಪುಡಿಮಾಡಿದರೆ ಕೆಂಪು ಬರುತ್ತದೆ. ಹಸುರು ಬಣ್ಣ ಬೇಕಾದರೆ ಹುಣಿಸೆ ಎಲೆ ಒಣಗಿಸಿ ಪುಡಿಮಾಡಿದರಾಯಿತು; ಏನು ಕಷ್ಟ!'

ಹುಡುಗರು ಇಂಥ ವಿವಿಧ ವಸ್ತುಗಳನ್ನು ತಂದು ಚಿತ್ರ ಮಾಡಿದಾಗ — ಯಾರಿಗೆ ಆ ಮಾಧ್ಯಮದಲ್ಲಿ ಕಣ್ಣಿದೆ, ಪ್ರೀತಿಯಿದೆ, ಮತ್ತು ಆಕೃತಿಗಳ ಕಲ್ಪನೆಯಿದೆ — ಎಂಬುದು ಗೊತ್ತಾಗ ತೊಡಗಿತು.

ಇನ್ನೊಂದು ಪ್ರಯೋಗದಲ್ಲಿ ಹಳ್ಳಿಯಲ್ಲಿ ಏನೇನು ಕುಣಿತಗಳಿವೆ — ಎಂಬುದನ್ನು ತಿಳಿಯುವುದಕ್ಕೆ ಸಾಧ್ಯವಾಯಿತು.

ಮತ್ತೊಂದು ಪ್ರಯೋಗದಲ್ಲಿ ನಾಟಕದ ವಿಚಾರ ಹೇಳಿದೆ. ಅದರ ಮುಖ್ಯಾಂಶ ಹೀಗಿತ್ತು:— 'ಕಲಿತ ಮಾತು ಬೇಡ, ನೀವು ಆರಿಸಿದ ಕಥೆ; ಅಥವಾ ನೀವೇ ಕಟ್ಟಿದ ಕಥೆ; ಯಾವುದಾದರೂ ಸರಿಯೆ, ಬಾಯಿಪಾಠ ಕಲಿಯದೆ ಆಡಬೇಕು. ವೇಷಭೂಷಣ ನೀವು ನೀವೇ ತಯಾರಿಸಬೇಕು ಎಂದೆ. ಕೆಲವು ಮಕ್ಕಳ ಪಾಲಿಗೆ ಯಕ್ಷಗಾನ ಮೆಚ್ಚಿಗೆಯಾಯಿತು. ಯುದ್ಧ, ಕುಣಿತ, ರಾಕ್ಷಸವೇಷ ಸಿದ್ಧವಾದುವು. ಅವರೇ ಭಾಗವತರು, ಚಿಮಣಿ ಡಬ್ಬಿಗಳೇ ಅವರ ಚಂಡೆ ಮದ್ದಳೆಗಳಾದುವು. ಅಂಥ ಪ್ರಯೋಗದಲ್ಲಿ ಮಕ್ಕಳು ಅಪೂರ್ವ ಉತ್ಸಾಹವನ್ನು ತೋರಿಸುವುದು ಕಂಡುಬಂದಿತು.

ಈ ರೀತಿ ದೊರಕಿಸಿದ ಪ್ರಾಥಮಿಕ ಅನುಭವಗಳಿಂದ — ಏಳು ದಿನಗಳ ವ್ಯಾಪ್ತಿಯ ಮಕ್ಕಳ ಕೂಟವನ್ನು ರೂಪಿಸುವುದಕ್ಕೆ ಸಾಧ್ಯವಾಯಿತು. ಏಳು ದಿನಗಳಲ್ಲಿ ಒಂದೊಂದು ಶಾಲೆಯಿಂದ ಹತ್ತು ಹತ್ತು ಪ್ರತಿನಿಧಿಗಳನ್ನು ಆರಿಸಿ, ಯಾವುದಾದರೊಂದು ಊರಿನಲ್ಲಿ ನೆಲೆಸಿ, ಕೂಟ ಜರುಗಿಸುವ ನಿರ್ಣಯ ಮಾಡಿದೆವು. ಪ್ರತಿದಿನ ಬೆಳಿಗ್ಗೆ ಎರಡು ಘಂಟೆ, ಸಂಜೆ ಎರಡು ಘಂಟೆ — ಅಥವಾ ಹೆಚ್ಚಿಗೆ, ಕಥೆ ಹೇಳುವಿಕೆ, ಗಾದೆಗಳ ಸ್ಪರ್ಧೆ, ಒಗಟಿನ ಸ್ಪರ್ಧೆ, ಮಣ್ಣಿನಲ್ಲಿ, ಕಾಗದದಲ್ಲಿ ಹೂವೆಲೆಗಳಲ್ಲಿ ಚಿತ್ರ ನಿರ್ಮಾಣ, ಅಶುನಾಟಕ, ಕುಣಿತ, ಜಾನಪದ ಗೀತೆ, ಪಶುಪ್ರಾಣಿಗಳ ಕೂಗಿನ ಅನುಕರಣೆ ಇತ್ಯಾದಿ ಕಾರ್ಯಕ್ರಮಗಳನ್ನು ರೂಪಿಸಿದೆವು. ಸಂಜೆಹೊತ್ತು — ಉಪಾಧ್ಯಾಯರಿಂದ ನಾಟಕವನ್ನೋ ಚಾರಿತ್ರಿಕ ಇಲ್ಲವೆ ಭೌಗೋಳಿಕ ದೃಶ್ಯಾವಳಿಗಳನ್ನೋ ಚಲಚ್ಚಿತ್ರವನ್ನೋ ಮಾಯಲಾಂದ್ರದ ಮೂಲಕ ಮಕ್ಕಳಿಗೆ ಹೊಸ ಕಥೆಗಳನ್ನೋ ಪ್ರದರ್ಶಿಸುವ ಏರ್ಪಾಟನ್ನು ಮಾಡಿದೆವು.

ಸುಮಾರು ಐದು ವರ್ಷಗಳ ಕಾಲ — ಒಂದೊಂದು ವಾರ ಉಪ್ಪಿನಂಗಡಿ, ಬೆಳ್ತಂಗಡಿ, ವಿಟ್ಲ, ಕನ್ಯಾನ, ಸುಳ್ಯ ಮೊದಲಾದ ಊರುಗಳಲ್ಲಿ ಇಂಥ ಕೂಟಗಳನ್ನು ನಡೆಸಿದೆವು. ಅದರಲ್ಲಿ 60 ಮಂದಿ ವಿದ್ಯಾರ್ಥಿ ಪ್ರತಿನಿಧಿಗಳು, ಅವರ ಜತೆಗೆ 10 ಮಂದಿ ಉಪಾಧ್ಯಾಯ ರಕ್ಷಕರು, ಇವರಲ್ಲದೆ ನಿರೀಕ್ಷಿಸಲು ಬರುವ ಇಪ್ಪತ್ತೊಮೂವತ್ತೊ ಉಪಾಧ್ಯಾಯರು — ಹೀಗೆ ನೂರಾರು ಮಂದಿಯನ್ನು ಸಾಕುವ ಏರ್ಪಾಟು ನಡೆಯಿತು. ಸ್ವಾಗತಿಸುವ ಶಾಲೆಯವರು ಮಕ್ಕಳೂ, ಉಪಾಧ್ಯಾಯರೂ ಸೇರಿ — ಈ ಕೂಟದ ಸಲುವಾಗಿ ಚಪ್ಪರ ಏರ್ಪಡಿಸಿದರು. ಸೇವೆ ಸಲ್ಲಿಸಿದರು. ಶಿವರಾಯರ ಪ್ರಭಾವದಿಂದ ಇವುಗಳ ಯಾವತ್ತು ಊಟ ಉಪಚಾರಗಳ ಭಾರವನ್ನು, ಆರ್ಥಿಕ ಹೊಣೆಯನ್ನು ಆಯಾಯ ಊರಿನ ಗಣ್ಯವ್ಯಕ್ತಿಗಳು ಬಂದು, ಕುಳಿತು ಸಂತೋಷದಿಂದ ನಿರ್ವಹಿಸಿದರು. ಇದರ ಪರಿಣಾಮ — ಏನಿಲ್ಲದೆ ಹೋದರೂ ಮಕ್ಕಳಲ್ಲಿರುವ ಸುಪ್ತಶಕ್ತಿಯನ್ನು ಅವರ ಹಿರಿಯರು, ಉಪಾಧ್ಯಾಯರು ಗುರುತಿಸುವ ಒಂದು ಅಪೂರ್ವ ಅವಕಾಶ ದೊರೆಯಿತು. ಈ ಕಾಲದಲ್ಲಿ ಅತಿಥಿಗಳಾಗಿ, ಪ್ರೇಕ್ಷಕರಾಗಿ ಹೊರಗಿನಿಂದಲೂ ಕೆಲವರು ಬರುತ್ತಿದ್ದರು. ಹೊಯ್ಸಳ, ರಾಜರತ್ನಂ, ಮಕ್ಕಳ ವಿದ್ಯಾಭ್ಯಾಸದಲ್ಲಿ ವಿಶೇಷ ಕುತೂಹಲ ತಾಳಿದ್ದ ಪಂಜೆ ಮಂಗೇಶರಾಯರು ಇಂಥವರಲ್ಲಿ ಮುಖ್ಯರು. ಆ ಕಾಲಕ್ಕೆ ದಕ್ಷಿಣ ಕನ್ನಡ ಜಿಲ್ಲಾಬೋರ್ಡನ್ನು ನಡೆಯಿಸುತ್ತಿದ್ದ ಎ.ಬಿ.ಶೆಟ್ಟರವರೂ ಇವನ್ನೆಲ್ಲ ಬಂದು ನೋಡಿ, ಮೆಚ್ಚಿ ಹೋದುದುಂಟು.

ಈ ಬೇರೆ ಬೇರೆ ಕೂಟಗಳಲ್ಲಿ ಕಾಣಿಸಿಕೊಂಡ ಕೆಲವೊಂದು ಅಪೂರ್ವ ವಿಷಯಗಳನ್ನು ಕುರಿತು ಇಲ್ಲಿ ಹೇಳ ಬಯಸುತ್ತೇನೆ.

ಇದರ ಖರ್ಚು ವೆಚ್ಚಗಳ ಭಾರವನ್ನು ಆಯಾಯ ಊರಿನವರು ಹೊತ್ತರು. ಆ ತ್ಯಾಗಕ್ಕೆ ಪ್ರೇರಣೆ ಬಂದದ್ದು ಸ್ವತ: ತ್ಯಾಗ ನಿಸ್ಸೀಮರಾದ ಶಿವರಾಯರಿಂದಲೇ. ನನ್ನ ಪಾತ್ರವೇನಿದ್ದರೂ ಅದರ ಕಾರ್ಯಕ್ರಮಗಳನ್ನು ರೂಪಿಸುವಷ್ಟಕ್ಕೆ ಸೀಮಿತವಾಗಿತ್ತೇ ಹೊರತು, ಸ್ವಂತದ ಪ್ರಭಾವವೇನಿರಲಿಲ್ಲ. ಈ ಸಂದರ್ಭದಲ್ಲಿ ನಾನು ಸಂದರ್ಶಿಸಿದ ಶಾಲೆಗಳ ವಿದ್ಯಾರ್ಥಿಗಳು, ಉಪಾಧ್ಯಾಯರು ತೋರಿಸಿದ ಸೋದರಭಾವ ಮತ್ತು ವಿಶ್ವಾಸಗಳು ನನ್ನ ಬದುಕಿನ ಉದ್ದಕ್ಕೂ ಉಳಿದುಕೊಂಡಿವೆ. ಅವರ ಪಾಲಿಗೆ ತೀರ ಹೊಸತಾಗಿದ್ದ ಈ ಎಲ್ಲ ಪ್ರಯೋಗಗಳು ಕುತೂಹಲಕಾರಿಯಾಗಿದ್ದುವಾದರೂ, ಅವೆಲ್ಲ ನಿತ್ಯದ ಪಾಠಪ್ರವಚನಗಳಿಗೆ ಪ್ರಯೋಜನಕ್ಕೆ ಬಾರದವು — ಎಂಬ ತೀರ್ಮಾನ ಬಹಳ ಮಂದಿಗೆ ಅಂಟಿಕೊಂಡಿತ್ತು. ಆದರೆ ಕೆಲವು ಉಪಾಧ್ಯಾಯರಿಗೆ ಮಾತ್ರ — ತಮ್ಮ ಮಕ್ಕಳಲ್ಲಿ ಅಡಗಿರುವ ವಿವಿಧ ರೀತಿಯ ಶಕ್ತಿಗಳು ಏನೂ ಪ್ರಯೋಜನವಿಲ್ಲದೆ ಅರಳದೆ ಹೋಗುತ್ತವೆಯಲ್ಲ ಎಂಬ ಅರಿವಾದುದುಂಟು.

ಮಕ್ಕಳ ಕೂಟವನ್ನು ನಾವು ಯಾವ ಸ್ಥಳದಲ್ಲಿ ಜರಗಿಸುತ್ತಿದ್ದೆವೋ, ಅಲ್ಲಿನ ಉಪಾಧ್ಯಾಯರಿಗೆ ಮತ್ತು ಅವರ ಬೆಂಬಲದ ವಿದ್ಯಾರ್ಥಿಗಳಿಗೆ ಅದು ಶ್ರಮದಾಯಕ ಹೊಣೆಗಾರಿಕೆಯಾಗಿತ್ತು. ಒಂದೆರಡು ಕಡೆಗಳಲ್ಲಿ ಶಾಲೆಯ ಸಮತಟ್ಟಾದ ನೆಲವಿದ್ದಿರಲಿಲ್ಲ. ಅಂಥಲ್ಲಿ ಅವರೇನೇ ವಿಶಾಲ ಚಪ್ಪರಗಳಿಗೆ ಬೇಕಾದ ನೆಲವನ್ನು ಅಗೆದು ಸಮತಟ್ಟು ಮಾಡಿದರು ; ಚಪ್ಪರದ ಸಾಮಗ್ರಿಗಳನ್ನು ಹೊತ್ತು ತಂದರು ; ಚಪ್ಪರವನ್ನು ಅಳಿದು ಅದರ ಸಾಮಗ್ರಿಗಳನ್ನು ಊರವರಿಗೆ ಮುಟ್ಟಿಸಿದರು. ಈ ಎಲ್ಲ ಶ್ರಮ ಸಾಹಸಗಳ ಕೆಲಸ ಉತ್ಸಾಹದಿಂದಲೇ ನಡೆದವು. ಇಂತಹ ಉತ್ಸಾಹ ಎಲ್ಲ ಕಾಲದಲ್ಲಿಯೂ ಇರುತ್ತದೆ, ಎಲ್ಲರಲ್ಲಿಯೂ ಇರುತ್ತದೆ — ಎಂದು ನಾವು ಎಣಿಸುವುದು ತಪ್ಪು. ಇವು ಒಂದೊಂದು ಕಾಲದಲ್ಲಿ, ಯಾರದ್ದಾದರೂ ಪ್ರೇರಣೆಯಿಂದ ನಮ್ಮಲ್ಲಿ ಮೂಡಿ ಮಾಯವಾಗುವ ಬದುಕಿನ ವಿದ್ಯಮಾನಗಳು. ತಮ್ಮ ಹೊಟ್ಟೆಪಾಡಿಗಾಗಿ ಬಡಿದಾಡುವ ಬಡ ಉಪಾಧ್ಯಾಯರಿಂದ, ಇಲ್ಲವೆ, ಅರೆಹೊಟ್ಟೆಯಿಂದ ಶಾಲೆಗೆ ಬರುವ ವಿದ್ಯಾರ್ಥಿಗಳಿಂದ ನಾವು ನಿತ್ಯಥಾ ಇಂಥ ಸೇವೆ, ಉತ್ಸಾಹವನ್ನು ಅಪೇಕ್ಷಿಸಿದರೆ ಅಪರಾಧವೇ ಆದೀತು ಅವರಲ್ಲಿರುವ — ಇಂಥ ಒಳ್ಳೆಯ ಗುಣಗಳಿಗೆ ನಾವು ಉಚಿತವಾದ ಮನ್ನಣೆ ಕೊಡದೇ ಹೋದರೂ ಅಷ್ಟೇ ತಪ್ಪಾದೀತು. ಇಂಥ ಉಪಾಧ್ಯಾಯರ ಬಳಗದಿಂದ, ಮುಂದೆ 8-10 ವರ್ಷಗಳ ಕಾಲ ನಾನು ಪುತ್ತೂರಿನಲ್ಲಿದ್ದು ನಡೆಯಿಸಿದ ದಸರಾ ಉತ್ಸವಗಳಿಗೆ, ತಿಂಗಳ ಕಾಲದ ಸೇವಾ ಶಿಬಿರಗಳಿಗೆ, ಹಲವಾರು ಮಂದಿ ಉಪಾಧ್ಯಾಯರು ಕೇಳಿದೊಡನೆ ಬಂದು, ಇದ್ದು, ನನಗೆ ನೆರವಾದರು. ಜೀವನದಲ್ಲಿ ನಿತ್ಯ ಬಡತನ ಅವರದ್ದಾದರೂ, ಪ್ರಾಮಾಣಿಕ ಸೇವೆಯ ದೊಡ್ಡಸ್ತಿಕೆ ಅವರಲ್ಲಿ ತುಂಬಿಕೊಂಡದ್ದು ನಾನೆಂದೂ ಮರೆಯಲಾರೆ.

(ಈ ಭಾಗವನ್ನು ಡಾ.ಕೆ. ಶಿವರಾಮಕಾರಂತರ 'ಸ್ಮೃತಿ ಪಟಲ-1' ಪುಟ 366 ರಿಂದ 375 ರಿಂದ ಆಯ್ದುಕೊಳ್ಳಲಾಗಿದೆ.)

## ಅಭ್ಯಾಸ - 1

1. ಕಾರಂತರು ಕಾಲೇಜನ್ನು ಬಿಟ್ಟು ಬೇರೆಲ್ಲಿಗೆ ಹೋಗಬೇಕೆಂದು ಆಶಿಸಿದರು? ಅವರ ಆಸೆ ಕೈಗೂಡಿತೆ?

.......................................................................................................

.......................................................................................................

.......................................................................................................

.......................................................................................................

2. ಕಾರಂತರಲ್ಲಿ ರಾಷ್ಟ್ರೀಯತ್ವದ ಕಲ್ಪನೆ ಕೆರಳುವುದಕ್ಕೆ ಕಾರಣವೇನು? ಮತ್ತು 'ದೇಶದ ಭವಿಷ್ಯ ಮತ್ತು ಸ್ವಾತಂತ್ರ್ಯ ನನ್ನ ವೈಯಕ್ತಿಕ ಜೀವನಕ್ಕಿಂತ ದೊಡ್ಡದು' ಅನ್ನಿಸಲು ಕಾರಣವೇನು?

.......................................................................................................

.......................................................................................................

.......................................................................................................

.......................................................................................................

3. ಕಾರಂತರು ಕಾಲೇಜು ಬಿಟ್ಟು ಮಾಡಿದ ಕೆಲಸಗಳು ಯಾವುವು?

.......................................................................................................

.......................................................................................................

.......................................................................................................

.......................................................................................................

4. ಕಾರಂತರ ಶಿಕ್ಷಣ ಪದ್ಧತಿಯ ಸ್ಥೂಲ ಕಲ್ಪನೆ ಏನು?

.......................................................................................................

.......................................................................................................

.......................................................................................................

.......................................................................................................

5. 'ನ್ಯೂ ಇರಾ' ಪತ್ರಿಕೆ ಯಾವ ಕಾರಣಕ್ಕಾಗಿ ವಿಶೇಷ ಆಸಕ್ತಿಯನ್ನು ಕೆರಳಿಸಿತು?

.......................................................................................................

.......................................................................................................

.......................................................................................................

.......................................................................................................

6. ಮಕ್ಕಳು ಕ್ರಿಯಾಶೀಲ ವ್ಯಕ್ತಿತ್ವ ಬೆಳೆಸಿಕೊಳ್ಳಲು ಕಾರಂತರು ಮತ್ತು ಅವರ ಸ್ನೇಹಿತರು ಯಾವ ಕೆಲಸ ಮಾಡಿದರು? ವಿವರಿಸಿ.

..............................................................................................................................

..............................................................................................................................

..............................................................................................................................

..............................................................................................................................

7. ಕಾರಂತರು ಯೋಜಿಸಿದ 'ಮಕ್ಕಳ ಸಮ್ಮೇಳನ'ವು ಎಂಥದ್ದು? ಹಾಗೆ ಯೋಚಿಸಿದ ಕಾರಣವೇನು?

..............................................................................................................................

..............................................................................................................................

..............................................................................................................................

..............................................................................................................................

8. ಶಾಲೆಯಲ್ಲಿ ಮಕ್ಕಳಿಗೆ ಏನು ಬೇಕು ಎಂಬುದನ್ನು ಕಾರಂತರು ಹೇಗೆ ಕಂಡುಕೊಂಡರು?

..............................................................................................................................

..............................................................................................................................

..............................................................................................................................

..............................................................................................................................

## 16.3 ಸಾರಾಂಶ

ಮನುಷ್ಯ ತನ್ನನ್ನು ತಾನು ಅರಿತುಕೊಳ್ಳಲು, ತನ್ನ ಜೀವಿತ ಕಾಲದಲ್ಲಿ ನಡೆದ ಘಟನೆಗಳಿಗೆ ರೂಪಕೊಟ್ಟು ದಾಖಲು ಮಾಡಿರುವುದು ಆತ್ಮಚರಿತ್ರೆ, ಆತ್ಮಕಥೆಗೆ ಒಂದು ಉದ್ದೇಶವಿರುತ್ತದೆ. ಇದು ವ್ಯಕ್ತಿಯ ಮಾನಸಿಕ ಬದಲಾವಣೆಯನ್ನು ಸೂಚಿಸುತ್ತದೆ.

'ನನ್ನ ಜೀವನ ಸ್ಮೃತಿಗಳು' ಎಂಬ ಭಾಗದಲ್ಲಿ ವ್ಯಕ್ತಿಗೂ ಸಮಾಜಕ್ಕೂ ಇರುವ ಸಂಬಂಧಗಳೊಡನೆಯೇ ಕರ್ನಾಟಕದ ಸ್ಥಿತಿಗತಿಗಳು ವ್ಯಕ್ತವಾಗುತ್ತವೆ. ರಾಜ್ಯ ಮಟ್ಟದ ಚಳವಳಿಯಿಂದ ರಾಷ್ಟ್ರಮಟ್ಟದ ಚಳವಳಿಯ ಚಟುವಟಿಕೆಗಳಿಗೂ, ರಾಜಕೀಯ ವಾತಾವರಣ, ಸ್ವಾತಂತ್ರ್ಯ ಸಂಗ್ರಾಮಗಳಿಗೂ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯ ಅನಿಸಿಕೆಗಳು ದಾಖಲಾಗಿವೆ.

ಒಬ್ಬ ವ್ಯಕ್ತಿಯು ದೇಶಕ್ಕಾಗಿ, ಅದರ ಹಿತಕ್ಕಾಗಿ ಮಾಡಬೇಕಾದ ತ್ಯಾಗ, ಸಾಹಸ, ನೋವು ಇವುಗಳ ವಿಷಯ ತಿಳಿಯುತ್ತದೆ. ರಾಷ್ಟ್ರ ಮಟ್ಟದ ಕಲ್ಪನೆ, ರಾಜ್ಯ ಕಲ್ಪನೆ — ಅಂದರೆ ಸಾರ್ವಜನಿಕ — ವೈಯಕ್ತಿಕ ಎರಡೂ ವಿಷಯಗಳನ್ನೂ ಹೇಗೆ ಪರಿಕಲ್ಪಿಸಿಕೊಳ್ಳಬೇಕೆಂಬ ಕಲ್ಪನೆ ಇದೆ.

'ಅನಿಶ್ಚಿತಗುರಿ' ಯಲ್ಲಿ ವೈಯಕ್ತಿಕವಾದ ವಿಷಯಗಳಿಗೆ ಹೆಚ್ಚಿನ ಒತ್ತು ಇದೆ. ವೈಯಕ್ತಿಕ ಹೋರಾಟ, ಗುರಿಗಳಿಗೆ ಸಾಧನೆ. ಸಾರ್ವಜನಿಕವಾದದ್ದರಿಂದ ವೈಯಕ್ತಿಕ ಸಾಧನೆಗೆ ಆಗುವ ಅನುಕೂಲ ಅನನುಕೂಲಗಳು ಮಾನಸಿಕ ಜೀವನದಲ್ಲಿ ಕಾಣಿಸಿಕೊಂಡ ಅನಿಸಿಕೆ, ಅಭಿರುಚಿ, ಬೆಳೆಸಿಕೊಳ್ಳುವುದಕ್ಕೆ ಪಟ್ಟ ಕಾರ್ಪಣ್ಯ. ಅಂತೆಯೇ ಮಕ್ಕಳ ಶಿಕ್ಷಣಕ್ಕೆ ಕೊಡಬೇಕೆಂದುಕೊಂಡ ತಿರುವು. ಅದಕ್ಕಾಗಿ ಪಟ್ಟ ಶ್ರಮ ಇವು ವ್ಯಕ್ತವಾಗಿವೆ.

## ಅಭ್ಯಾಸಗಳಿಗೆ ಉತ್ತರಗಳು

1. ಕಾರಂತರು ಕಾಲೇಜು ಸೇರಿದ ಎರಡು ತಿಂಗಳಿಗೇ ಪಠ್ಯಕ್ರಮದಲ್ಲಿ ಬೇಸರ ಬಂದಿತು. ಅದರ ಫಲವಾಗಿ ಅವರು ರವೀಂದ್ರನಾಥಠಾಕೂರರು ನಡೆಸುತ್ತಿದ್ದ ಶಾಂತಿನಿಕೇತನ ಸಂಸ್ಥೆ ಸೇರಬಯಸಿದರು. ಆದರೆ ಪಠ್ಯಕ್ರಮದಲ್ಲಿ ವ್ಯತ್ಯಾಸವಿದ್ದರಿಂದ, ಪಾಲಿ, ಅರ್ಧಮಾಗಧಿ ಮುಂತಾದ ಭಾಷೆಗಳು ಅವರಿಗೆ ಏನನ್ನು ಕೊಟ್ಟಾವು ಎಂಬ ಅನುಮಾನವೂ ಬಂತು ಮತ್ತು ಬಂಗಾಲೀ ಸಮಾಜ — ಮಡಿವಂತಿಕೆ ಇವೆಲ್ಲ ಅಡ್ಡ ಬಂದವು. ಆದ್ದರಿಂದ ಆ ಕಲ್ಪನೆ ನಿಜವಾಗಲಿಲ್ಲ.

2. ಕಾರಂತರು ಫೋರ್ತ್‌ಫಾರಂ ಓದುತ್ತಿದ್ದಾಗ ಅನಿಬೆಸೆಂಟರ ಚಳವಳದಿಂದ ದೇಶೀಯ ವಿದ್ಯಾಭ್ಯಾಸದ ಮೋಹಕ್ಕೆ ಗುರಿಯಾದ ಅಂಕುರ, ಗಾಂಧೀಜಿಯ ಉಪನ್ಯಾಸದಿಂದ ಬೆಳೆದು, ರಾಜಕೀಯದ ಗೀಳು ಹೆಚ್ಚಿತು. ಲೋಕಮಾನ್ಯ ತಿಲಕರ ರಾಜಕೀಯ ಪೂರ್ವ ಜೀವನದ ಪ್ರಭಾವ ಕಾರಂತರಲ್ಲಿ ರಾಷ್ಟ್ರೀಯತ್ವದ ಕಲ್ಪನೆ ಕೆರಳಲು ಕಾರಣವಾಯಿತು. ಇದು ಹಿರಿಯರನ್ನು ಕಿರಿಯರನ್ನು ಅಶಾಂತಿಗೆ ಗುರಿಪಡಿಸಿತು. ಒಡಹುಟ್ಟಿದವರನ್ನು, ತಂದೆಯನ್ನು ಕೇಳದೆ

ಈ ಚಳುವಳಿಗಳಿಗೆ ಧುಮುಕಿದರು. ಅದಕ್ಕೆ ಕಾರಣ ದೇಶದ ಭವಿಷ್ಯ ಮತ್ತು ಸ್ವಾತಂತ್ರ್ಯ ಅವರ ವೈಯಕ್ತಿಕ ಜೀವನಕ್ಕಿಂತ ದೊಡ್ಡದು ಎನಿಸಿದ್ದು.

3. ಕಾಲೇಜನ್ನು ಬಿಟ್ಟು ಕಾರಂತರು ಗಾಂಧೀಜಿಯವರ ಸಂದೇಶವನ್ನು ಹಬ್ಬಿಸುವ ಕಾರ್ಯ ಕೈಕೊಂಡರು. ಖಾದಿ ಉತ್ಪಾದನೆ ಮತ್ತು ವ್ಯಾಪಾರ ಮಾಡಿದರು. ವಸಂತ ಮಾಸಪತ್ರಿಕೆ ಹೊರಡಿಸಿದರು. ಮಾನಸಿಕ ಜೀವನದ ಅಭಿರುಚಿಯಿಂದ ಅಲೆದಾಟ. ಶಾಲಾ ಕಾಲೇಜಿಗಿಂತ ಭಿನ್ನವಾದ 'ಆಶ್ರಮ ಶಿಕ್ಷಣ' ಪದ್ಧತಿಯನ್ನು ಬೆಳೆಸಬೇಕೆಂಬ ಭಾವನೆಯಲ್ಲಿ ತೊಳಲಾಟ.

4. ಬ್ರಿಟೀಷರ ಶಿಕ್ಷಣ ಕ್ರಮಕ್ಕಿಂತ ಭಿನ್ನವಾದ, ಭಾರತವನ್ನು ಕಟ್ಟುವ, ರಾಷ್ಟ್ರೀಯತ್ವವನ್ನು ಬೋಧಿಸುವ ಶಿಕ್ಷಣ ಪದ್ಧತಿಯನ್ನು ಬೆಳೆಸುವುದು ಕಾರಂತರ ಶಿಕ್ಷಣ ಪದ್ಧತಿಯ ಸ್ಥೂಲ ಕಲ್ಪನೆ.

5. 'ನ್ಯೂ ಇರಾ' ಪತ್ರಿಕೆಯ ಮಕ್ಕಳ ಶಿಕ್ಷಣವನ್ನು ಕುರಿತು ಸಿಜೆಗರು ನಡೆಯಿಸುತ್ತಿದ್ದ ಅನೇಕ ಪ್ರಯೋಗಗಳ ವಿವರಣೆಗಳಿಗೆ ಕಾರಂತರು ಮಾಡಬೇಕೆಂದಿದ್ದ | ಶಿಕ್ಷಣ ಕ್ರಮದ ಆಲೋಚನೆಗಳು ಸರಿಹೊಂದಿದ್ದರಿಂದ ಅವರ ಕುತೂಹಲ ಕೆರಳಿತು.

6. ಮಕ್ಕಳಿಗಾಗಿ ನಾಟಕಗಳನ್ನು ರಚಿಸಿದರು. ಮಕ್ಕಳ ಬಾಹ್ಯ ಚಟುವಟಿಕೆಗಳನ್ನು ಬೆಳೆಸಲು ಪೂರಕವಾದ ಹಬ್ಬ ಹರಿದಿನಗಳ ಆಚರಣೆ ಮಾಡಿಸುವುದು, ಶಾಲಾ ಪತ್ರಿಕೆ ಹೊರಡಿಸುವುದು.

7. ಮಕ್ಕಳ ಸಮ್ಮೇಳನವು — ಭಾಷಣ, ಠರಾವು ಮಾದರಿಯ ; ಹಿರಿಯರ ಸಮ್ಮೇಳನದ ಅನುಕರಣೆ ಆಗಿರಬಾರದು. ಅದು ಮಕ್ಕಳದ್ದೇ ಕೂಟವಾಗಿರಬೇಕು. ಮಕ್ಕಳು ತಮ್ಮತನವನ್ನು ತೋರಿಸುವುದಕ್ಕೆ ಅನುಕೂಲವಾಗಿರಬೇಕು ಎಂಬುದಾಗಿತ್ತು.

8. ಶಾಲೆಗಳಿಗೆ ಭೇಟಿ ಕೊಟ್ಟು ಪ್ರತಿಯೊಂದು ಶಾಲೆಯಲ್ಲೂ 3-4 ದಿನಗಳಿದ್ದು ಮಕ್ಕಳಿಂದ ವಿವಿಧ ರೀತಿಯ ಕಥೆ ಹೇಳಿಸಿ, ಅದು ಎಷ್ಟು ಕ್ರಿಯಾತ್ಮಕ ಕಲೆ ಎಂದು ಮನಗಂಡರು. ಶಾಲೆಯ ಪುಸ್ತಕದಲ್ಲಿ ಮಕ್ಕಳ ವಯಸ್ಸಿಗೆ, ಮನೋಧರ್ಮಕ್ಕೆ ಪ್ರೀತಿಗೆ ಒಲಿಯುವ ಹಾಡುಗಳ ಕೊರತೆ ಇರುವುದನ್ನು ಗಮನಿಸಿದರು. ಶಾಲೆಯ ಹಾಡು ಗಳಿಗಿಂತ ಸುತ್ತುಮುತ್ತಲಿನ ಸ್ನೇಹಿತರು, ಜನರು ಹಾಡುವ ಹಾಡನ್ನು ಅದು — ತುಳುವೇ ಆಗಲೀ, ಕನ್ನಡವಾಗಲೀ, ಖುಷಿಯಿಂದ ಕಲಿತಿದ್ದಾಗಿರಬೇಕು ಅಂಥವನ್ನು ಹೇಳಿಸಬೇಕು. ಚಿತ್ರ ಬರೆಯುವುದು, ಬೊಂಬೆ ಮಾಡಿಸುವುದು, ಸುತ್ತಲಿನ ವಾಚಕಗಳು, ಕುಣಿತಗಳು ಮಕ್ಕಳಿಗೆ ಬೇಕು ಎಂಬುದನ್ನು ಶಾಲೆಗಳಿಗೆ ಭೇಟಿ ನೀಡಿ ಕಂಡುಕೊಂಡರು.